## ಪ್ರಾರ್ಥನೆ, ಸೂಕ್ತಿಪ್ರಭ

**ವೇದಮನೂಚ್ಯಾಚಾರ್ಯೋಽಂತೇವಾಸಿನಮನುಶಾಸ್ತಿ। ಸತ್ಯಂ ವದ। ಧರ್ಮಂ ಚರ। ಸ್ವಾಧ್ಯಾಯಾನ್ಮಾ ಪ್ರಮದಃ। ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ। ಸತ್ಯಾನ್ನ ಪ್ರಮದಿತವ್ಯಮ್। ಧರ್ಮಾನ್ನ ಪ್ರಮದಿತವ್ಯಮ್। ಕುಶಲಾನ್ನ ಪ್ರಮದಿತವ್ಯಮ್। ಭೂತ್ಯೈ ನ ಪ್ರಮದಿತವ್ಯಮ್। ಸ್ವಾಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಮ್। ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಮ್।**

ವೇದವನ್ನು ಬೋಧಿಸಿದ ನಂತರ ಆಚಾರ್ಯನು ಶಿಷ್ಯನಿಗೆ ಹೀಗೆ ಆದೇಶಿಸುತ್ತಾನೆ: ಸತ್ಯವನ್ನು ಹೇಳು; ಧರ್ಮವನ್ನು ಆಚರಿಸು. ಅಧ್ಯಯನದಲ್ಲಿ ಪ್ರಮಾದಮಾಡಬೇಡ, ಆಚಾರ್ಯನಿಗೆ ಇಷ್ಟವಾದ ಧನವನ್ನು ತಂದುಕೊಟ್ಟು ಸಂತತಿಯನ್ನು ವಿಚ್ಛಿನ್ನಗೊಳಿಸದಿರು. ಸತ್ಯದಿಂದ ಕದಲಕೂಡದು; ಧರ್ಮದಿಂದ ಕದಲಕೂಡದು; ಕುಶಲದಿಂದ ಕದಲಕೂಡದು; ಮಂಗಳಯುಕ್ತವಾದ ಕರ್ಮದಿಂದ ಕದಲಕೂಡದು; ಸ್ವಾಧ್ಯಾಯಪ್ರವಚನಗಳಿಂದ ಕದಲಕೂಡದು; ದೇವಪಿತೃಗಳ ಕಾರ್ಯದಿಂದ ಕದಲಕೂಡದು.

**ಮಾತೃದೇವೋ ಭವ। ಪಿತೃದೇವೋ ಭವ। ಆಚಾರ್ಯದೇವೋ ಭವ। ಅತಿಥಿದೇವೋ ಭವ। ಯಾನ್ಯನವದ್ಯಾನಿ ಕರ್ಮಾಣೀ। ತಾನಿ ಸೇವಿತವ್ಯಾನಿ। ನೋ ಇತರಾಣಿ। ಯಾನ್ಯಸ್ಮಾಕಗ್ಂ ಸುಚರಿತಾನಿ। ತಾನಿ ತ್ವಯೋಪಾಸ್ಯಾನಿ। ನೋ ಇತರಾಣಿ। ಯೇ ಕೇ ಚಾಸ್ಮಚ್ಛ್ರೇಯಾಗ್ಂಸೋ ಬ್ರಾಹ್ಮಣಾಃ। ತೇಷಾಂ ತ್ವಯಾಸನೇ ನ ಪ್ರಶ್ವಸಿತವ್ಯಮ್।**

ತಾಯಿಯೇ ನಿನಗೆ ದೇವರಾಗಿರಲಿ; ತಂದೆಯೇ ನಿನಗೆ ದೇವರಾಗಿರಲಿ; ಆಚಾರ್ಯನೇ ನಿನಗೆ ದೇವರಾಗಿರಲಿ; ಅತಿಥಿಯೇ ನಿನಗೆ ದೇವರಾಗಿರಲಿ. ಯಾವ ಕರ್ಮಗಳು ಅನಿಂದಿತವೊ ಅವುಗಳನ್ನು ಸೇವಿಸಬೇಕು, ಉಳಿದವುಗಳನ್ನು ಸೇವಿಸಕೂಡದು. ನಮ್ಮಲ್ಲಿ ಯಾವ ಒಳ್ಳೆಯ ನಡತೆಗಳಿವೆಯೊ ಅವುಗಳನ್ನೇ ಸೇವಿಸಬೇಕು, ಉಳಿದವುಗಳನ್ನು ಸೇವಿಸಕೂಡದು. ನಮಗಿಂತ ಉತ್ತಮರಾದ ಯಾವ ಯಾವ ಬ್ರಾಹ್ಮಣರಿರುವರೊ (ಸನ್ನಡತೆ ಹಾಗೂ ವಿದ್ವಾಂಸರಾದವರು) ಅವರನ್ನು ಆಸನಾದಿಪೂರ್ವಕವಾಗಿ ನೀನು ಆದರಿಸಬೇಕು.

**ಶ್ರದ್ಧಯಾ ದೇಯಮ್। ಅಶ್ರದ್ಧಯಾಽದೇಯಮ್। ಶ್ರಿಯಾ ದೇಯಮ್। ಹ್ರಿಯಾ ದೇಯಮ್। ಭಿಯಾ ದೇಯಮ್। ಸಂವಿದಾ ದೇಯಮ್। ಅಥ ಯದಿ ತೇ ಕರ್ಮವಿಚಿಕಿತ್ಸಾ ವಾ ವಿಚಿಕಿತ್ಸಾ ವಾ ಸ್ಯಾತ್। ಯೇ ತತ್ರ ಬ್ರಾಹ್ಮಣಾಃ ಸಂಮರ್ಶಿನಃ। ಯುಕ್ತಾ ಆಯುಕ್ತಾಃ। ಅಲೂಕ್ಷಾ ಧರ್ಮಕಾಮಾಃ ಸ್ಯುಃ। ಯಥಾ ತೇ ತತ್ರ ವರ್ತೇರನ್। ತಥಾ ತತ್ರ ವರ್ತೇಥಾಃ।**

ಶ್ರದ್ಧೆಯಿಂದ ಕೊಡಬೇಕು; ಅಶ್ರದ್ಧೆಯಿಂದ ಕೊಡಬಾರದು. ತನ್ನ ಐಶ್ವರ್ಯಕ್ಕೆ ತಕ್ಕಂತೆ ಕೊಡಬೇಕು; ವಿನಯದಿಂದ ಕೊಡಬೇಕು; ಭಯದಿಂದ ಕೊಡಬೇಕು; ಮಿತ್ರಭಾವದಿಂದ ಕೊಡಬೇಕು. ಇನ್ನು ನಿನಗೆ ಶ್ರೌತ ಸ್ಮಾರ್ತ ಕರ್ಮ ವಿಷಯದಲ್ಲಾಗಲಿ, ಸಂಶಯವುಂಟಾದರೆ –ವಿಚಾರಕ್ಷಮರೂ, ಕರ್ಮದಲ್ಲಿ ಸಮರ್ಥರೂ, ಕ್ರೂರರಲ್ಲದವರೂ, ಕಾಮರಹಿತರೂ ಆದ ಸಜ್ಜನರು ಹೇಗೆ ವರ್ತಿಸುವರೋ, ಹಾಗೆಯೇ ನೀನೂ ನಡೆದುಕೋ. (ತೈತ್ತಿರೀಯ ಉಪನಿಷತ್ತು, 'ಶೀಕ್ಷಾವಲ್ಲಿ'ಯಿಂದ)

**ಆ**ತ್ಮದ ಅನಿರ್ಬಂಧಿತ ಬೆಳವಣಿಗೆಗೆ ನೆರವು ನೀಡುವುದೇ ಶಿಕ್ಷಣದ ಉದ್ದೇಶ. *–ಡಾ. ಎಸ್. ರಾಧಾಕೃಷ್ಣನ್*

**ಜ**ನತೆಗೆ ಅವರು ಅರಿಯದ ವಿಷಯಗಳನ್ನು ಕಲಿಸುವುದು ಶಿಕ್ಷಣವಲ್ಲ, ಅವರು ಈಗ ಹೇಗೆ ವರ್ತಿಸುತ್ತಿಲ್ಲವೋ, ಆ ರೀತಿ ವರ್ತಿಸುವಂತೆ ಅವರನ್ನು ತಿದ್ದುವುದೇ ಶಿಕ್ಷಣ. *– ಜಾನ್ ರಸ್ಕಿನ್*

**ಶಿ**ಕ್ಷಣವು ಬುದ್ಧಿಗೆ ನೆರವು ನೀಡುತ್ತದೆ, ಆದರೆ ಅದು ಬುದ್ಧಿಶಕ್ತಿಯನ್ನೇನೂ ಸೃಷ್ಟಿಸುವುದಿಲ್ಲ. *–ಚೀನೀ ಗಾದೆ*

**ವಿ**ದ್ಯಾರ್ಥಿಯಲ್ಲಿರುವ ಸಂಪೂರ್ಣ ಶಕ್ತಿಯನ್ನು ಹೊರಗೆಳೆಯುವುದೇ ಶಿಕ್ಷಣದ ಸಾರಸರ್ವಸ್ವ. *–ಗಾಂಧೀಜಿ*

**ಹೇ**ಗೆ ಕಲಿಯಬೇಕು ಎಂದು ಕಲಿತಿರುವವರಷ್ಟೇ ಸಾಕಷ್ಟು ಕಲಿತಿರುವವರು. *–ಹೆನ್ರಿ ಬ್ರೂಕ್ಸ್ ಆಡಮ್*

**ಶಿ**ಕ್ಷಣವು ಅಸಂಖ್ಯಾತ ಜನರಿಗೆ ಓದನ್ನು ಕಲಿಸಿದೆ; ಆದರೆ ಯಾವುದನ್ನು ಓದಿದರೆ ಒಳಿತು ಎಂದು ನಿರ್ಧರಿಸುವ ವಿವೇಕವನ್ನು ಕಲಿಸಿಲ್ಲ. *– ಜಿ.ಎಂ. ಟ್ರೆವೆಲ್‌ಯಾನ್*

**ಶಿ**ಕ್ಷಣದ ರಹಸ್ಯವು ವಿದ್ಯಾರ್ಥಿಯನ್ನು ಗೌರವಿಸುವುದರಲ್ಲಿ ಅಡಗಿದೆ. *– ರಾಲ್ಫ್ ವಾಲ್ಡೋ ಎಮರ್‌ಸನ್*

**ಶಿ**ಕ್ಷಣದ ಬಗ್ಗೆ ಮುಖ್ಯ ಸಂಗತಿಯೆಂದರೆ ಇದು: ಅದು 'ಪ್ರಸರಿಸುವುದು' ಅಥವಾ 'ಪಿತ್ರಾರ್ಜಿತವಾದುದು' ಎಂಬ ಪದಗಳ ಹಾಗೆ ಒಬ್ಬ ವ್ಯಕ್ತಿಯು ಪಡೆದುಕೊಳ್ಳಬೇಕಾದ ಸಂಗತಿಯಲ್ಲ. ಮೂಲಭೂತವಾಗಿ ಶಿಕ್ಷಣ ಎಂಬುದು ಒಂದು 'ವಿಧಾನ'. *–ಜಿ.ಕೆ.ಚೆಸ್ಟರ್‌ಟನ್*

**ಶಿ**ಕ್ಷಣವನ್ನು ವ್ಯಾಖ್ಯಾನಿಸುವ ಈ ತಮಾಷೆಯ ವಾಕ್ಯದಲ್ಲಿ ತಪ್ಪೇನೂ ಇಲ್ಲ: "ಒಬ್ಬ ವ್ಯಕ್ತಿ ತಾನು ಶಾಲೆಯಲ್ಲಿ ಕಲಿತದ್ದನ್ನೆಲ್ಲವನ್ನೂ ಸಂಪೂರ್ಣವಾಗಿ ಮರೆತುಬಿಟ್ಟರೂ, ಯಾವುದು ಉಳಿದುಕೊಳ್ಳುವುದೋ ಅದೇ ಶಿಕ್ಷಣ." *–ಆಲ್ಬರ್ಟ್ ಐನ್‌ಸ್ಟೈನ್*

**ಶಿ**ಕ್ಷಣವೆಂದರೆ ಕೋಪ ಮಾಡಿಕೊಳ್ಳದೆ, ಅದೇ ಸಮಯದಲ್ಲಿ ನಮ್ಮ ಆತ್ಮವಿಶ್ವಾಸವನ್ನೂ ಕಳೆದುಕೊಳ್ಳದೆ, ಬೇರೆಯವರು ಏನು ಹೇಳುತ್ತಾರೋ ಅದೆಲ್ಲವನ್ನೂ ತಾಳ್ಮೆಯಿಂದ ಕೇಳಿಸಿಕೊಳ್ಳುವ ಸಾಮರ್ಥ್ಯ. *–ರಾಬರ್ಟ್ ಫ್ರಾಸ್ಟ್*

**ಪರಿಶುದ್ಧ ವಾತಾವರಣದ ಆಹ್ಲಾದಕರ ಪರಿಸರದಲ್ಲಿ ಪವಿತ್ರ ತೀರ್ಥಕ್ಷೇತ್ರ ಪ್ರವಾಸಗಳು ಹಾಗೂ ವರ್ಣರಂಜಿತ ನಯನಮನೋಹರ ಪ್ರೇಕ್ಷಣೀಯ ಸ್ಥಳಗಳ ಯಾತ್ರಾ ಪ್ರವಾಸಗಳು.**

**ರೂಂ ವಸತಿ ಮತ್ತು ಊಟ ಉಪಚಾರದೊಂದಿಗೆ, ರೈಲ್ವೆ ಕೋಚ್ ಹಾಗೂ ಲಕ್ಷುರಿ ಬಸ್ಸಿನಲ್ಲಿ**

**ಉತ್ತರ ಭಾರತ ತೀರ್ಥಯಾತ್ರೆ:** ದೆಹಲಿ, ಹರಿದ್ವಾರ್ ಬದರೀನಾಥ್, ಕೇದಾರನಾಥ್, ಅಯೋಧ್ಯೆ, ನೇಪಾಳ್, ವಾರಣಾಸಿ (ಕಾಶಿ), ಗಯಾ, ಅಲಹಾಬಾದ್, ಜೈಪುರ, ಆಗ್ರಾ, ಮಥುರ , ದೆಹಲಿ.

**ಹೊರಡುವ ದಿನಾಂಕ :** 17.09.2010, 20.09.2010, 22.09.2010, 27.09.2010, 29.09.2010, 17.10.2010 ರಿಂದ 26/22/18 ದಿನಗಳು.

**ಪವಿತ್ರ ಹೈಮಾಚಲ ಚಾರ್‌ಧಾಮ್ ಹಾಗೂ ಕಾಶಿ ಪ್ರವಾಸ:** ದೆಹಲಿ, ಹರಿದ್ವಾರ್, ಯಮುನೋತ್ರಿ, ಗಂಗೋತ್ರಿ, ಬದರೀನಾಥ್, ಕೇದಾರನಾಥ್, ವಾರಣಾಸಿ (ಕಾಶಿ), ಅಲಹಾಬಾದ್, ಗಯಾ, ಬುದ್ಧ ಗಯಾ.

**ಹೊರಡುವ ದಿನಾಂಕ :** 20.09.2010, 22.09.2010, 17.10.2010 ರಿಂದ 21 ದಿನಗಳು.

**ವರ್ಣರಂಜಿತ ಹಿಮಾಚಲ್‌ಪ್ರದೇಶ್ ಸ್ಪೆಷಲ್:** ದೆಹಲಿ, ಚಂಢೀಘಡ್, ಸಿಮ್ಲಾ, ಕುಲು ಮನಾಲಿ, ರೋತಂಗ್‌ಪಾಸ್, ಮಣಿಕರಣ್, ವೈಷ್ಣೋದೇವಿ, ಅಮೃತಸರ, ದೆಹಲಿ.

**ಹೊರಡುವ ದಿನಾಂಕ :** 25.09.2010, 29.09.2010, 01.10.2010, 17.10.2010 ರಿಂದ 15 ದಿನಗಳು.

**ಪಂಚದ್ವಾರಕ ಹಾಗೂ ಜ್ಯೋತಿರ್ಲಿಂಗಗಳ ದರ್ಶನ ಯಾತ್ರಾ (ರಾಜಾಸ್ಥಾನ್, ಗುಜರಾತ್, ಮಧ್ಯ ಪ್ರದೇಶ, ಮಹಾರಾಷ್ಟ್ರ ರಾಜ್ಯಗಳು):** ಜೈಪುರ್, ಪುಷ್ಕರ್, ನಾಥದ್ವಾರ್, ಕಾಂಕ್ರೋಲಿ, ಚಿತ್ತೋರ್‌ಘಡ್, ಉದಯಪುರ್, ಮಾತೃಗಯಾ, ಮೌಂಟ್ ಅಬು, ದ್ವಾರಕ, ನಾಗೇಶಂ, ಸೋಮನಾಥ್, ಅಹಮದಾಬಾದ್, ಉಜ್ಜಯಿನಿ, ಓಂಕಾರೇಶ್ವರ್, ಪರ್ಲಿವೈದ್ಯನಾಥ್, ಘೃಷ್ಣೇಶ್ವರ್, ಶಿರಡಿ, ನಾಸಿಕ್, ಭೀಮಾಶಂಕರ್.

**ಹೊರಡುವ ದಿನಾಂಕ :** 11.11.2010, 01.12.2010, ರಿಂದ 23 ದಿನಗಳು.

**ಆಂಧ್ರಪ್ರದೇಶ್ ಸ್ಪೆಷಲ್ :** ವಾಸವಿಪೆನುಕೊಂಡ, ದ್ರಾಕ್ಷಾರಾಮ್, ರ್‍ಯಾಲಿ, ಅನ್ನಾವರಂ, ವಿಶಾಖಪಟ್ನಂ, ಬುರ್‍ರಾಕೇವ್ಸ್, ಸಿಂಹಾಚಲಂ, ಭದ್ರಾಚಲಂ, ವಿಜಯವಾಡ.

**ಹೊರಡುವ ದಿನಾಂಕ :** 17.10.2010, 30.10.2010, 23.12.2010, 25.12.2010 ರಿಂದ 9 ದಿನಗಳು.

**ಶಿರಡಿ ಸಾಯಿಬಾಬಾ ದರ್ಶನ ಯಾತ್ರಾ:** ಬಿಜಾಪುರ, ಕೂಡಲಸಂಗಮ, ಫಂಡರಾಪುರ, ಎಲ್ಲೋರ, ಘೃಷ್ಣೇಶ್ವರ್, ಶನಿಸಿಂಗನಾಪುರ, ಶಿರಡಿ, ನಾಸಿಕ್, ತ್ರಯಂಭಕೇಶ್ವರ್, ಭೀಮಾಶಂಕರ್, ಕೊಲ್ಹಾಪುರ.

**ಹೊರಡುವ ದಿನಾಂಕ :** 10.10.2010, 16.10.2010, 23.12.2010, 25.12.2010 ರಿಂದ 9 ದಿನಗಳು.

ವಿವರಗಳಿಗೆ ಹಾಗೂ ರಿಜರ್ವೇಷನ್ನಿಗೆ ಕೂಡಲೇ ಸಂಪರ್ಕಿಸಿ:

# ಶ್ರೀ ಚೈತನ್ಯ ಟ್ರಾವೆಲ್ಸ್

(ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ ಪಡೆದಿದೆ)

ನಂ. 2/4, ಜಾನಕೀರಾಮ್ ಕಾಂಪ್ಲೆಕ್ಸ್, ಬಸವನಗುಡಿ ರಸ್ತೆ, ಉಮಾಟಾಕೀಸ್ ಬಸ್ ಸ್ಟಾಪ್ ಹತ್ತಿರ, ಚಾಮರಾಜಪೇಟೆ, ಬೆಂಗಳೂರು – 560 018 ದೂರವಾಣಿ : 26508925, 26674860

E-mail : Chaitanyayatra@yhoo.co Visit us at : www.srichaitanyatravels

# ಸ್ವಾಮಿ ವಿವೇಕಾನಂದರ ಶೈಕ್ಷಣಿಕ ತತ್ತ್ವ



**ತೈ**ತ್ತಿರೀಯ ಉಪನಿಷತ್ತಿನಲ್ಲಿ 'ಭೃಗುವಲ್ಲೀ' ಎನ್ನುವುದೊಂದು ಅಧ್ಯಾಯ. ಅಲ್ಲಿ ಬರುವ ಸ್ವಾರಸ್ಯಕರ ಪ್ರಸಂಗವಿದು. ಭೃಗು ವಾರುಣಿಯು ತನ್ನ ತಂದೆಯಾದ ವರುಣನನ್ನು ಸಮೀಪಿಸಿ ಹೀಗೆ ಪ್ರಶ್ನಿಸುತ್ತಾನೆ: "ಹೇ ಭಗವಂತನೇ, ಬ್ರಹ್ಮವನ್ನು ಉಪದೇಶಿಸು." ವರುಣ ಅವನಿಗೆ ಬ್ರಹ್ಮದ ಬಗ್ಗೆ ಉಪದೇಶ ಮಾಡುತ್ತಾನೆ. ಭೃಗು ಹೋಗಿ ತಪಸ್ಸನ್ನು ಮಾಡುತ್ತಾನೆ. ತಪಸ್ಸು ಮಾಡಿ 'ಅನ್ನ'ವೇ ಬ್ರಹ್ಮ ಎಂದು ತಿಳಿದುಕೊಂಡನು. ಮತ್ತೆ ತನ್ನ ತಂದೆಯ ಬಳಿ ಬಂದು, "ಹೇ ಭಗವಂತನೇ, ಬ್ರಹ್ಮವನ್ನು ಉಪದೇಶಿಸು" ಎಂದು ಕೇಳಿದನು. ಆಗ ವರುಣನು ಅವನಿಗೆ ಹೀಗೆ ಉಪದೇಶಿಸಿದನು: **ತಪಸಾ ಬ್ರಹ್ಮ ವಿಜಿಜ್ಞಾಸಸ್ವ, ತಪೋ ಬ್ರಹ್ಮೇತಿ** "ತಪಸ್ಸಿನಿಂದ ಬ್ರಹ್ಮವನ್ನು ತಿಳಿದುಕೋ, ತಪಸ್ಸೇ ಬ್ರಹ್ಮ." ಭೃಗುವು ತಪಸ್ಸು ಮಾಡಿದನು. ಹೀಗೆ ತಪಸ್ಸನ್ನು ಮಾಡಿ, ಅವನು ಪ್ರಾಣ, ಮನಸ್ಸು, ವಿಜ್ಞಾನ ಅಥವಾ ಬುದ್ಧಿ ಮತ್ತು ಆನಂದಗಳು ಬ್ರಹ್ಮ ಎಂದು ತಿಳಿದುಕೊಂಡನು. ಪ್ರತಿಯೊಂದು ಹಂತದಲ್ಲಿಯೂ ಅವನನ್ನು ಅವನ ಗುರು ತಪಸ್ಸು ಮಾಡೆಂದು ಪ್ರೋತ್ಸಾಹಿಸಿದನು. ಪ್ರಾಚೀನ ಭಾರತೀಯ ಶಿಕ್ಷಣ ವಿಧಾನದ ಒಂದು ಮಿಂಚುನೋಟ ಈ ಉದಾಹರಣೆಯಲ್ಲಿ ನಮಗೆ ಲಭಿಸುತ್ತದೆ. ಇದರಿಂದ ನಾವು ತಿಳಿದುಕೊಳ್ಳಬೇಕಾದ ಸಂಗತಿಗಳು ಇವು:

೧. **ವಿದ್ಯಾರ್ಥಿ ತನಗೆ ತಾನೇ ಕಲಿಯುತ್ತಾನೆ. ಎಲ್ಲ ಜ್ಞಾನವೂ ಅವನಲ್ಲೇ ಇದೆ:** ಭೃಗುವು ತನ್ನ ಸ್ವಂತ ಸಾಮರ್ಥ್ಯದಿಂದಲೇ ವಿದ್ಯೆಯನ್ನು ಅರಸುವಂತೆ ಅವನ ಗುರುವು ಪ್ರಚೋದನೆ ನೀಡುತ್ತಾನೆ. ಇದು ಬಾಹ್ಯ ಆಕರಗಳಿಂದ ಮಾಹಿತಿಗಳನ್ನು ಸಂಗ್ರಹಿಸುವುದಕ್ಕಿಂತ ಭಿನ್ನವಾದ ಕಲಿಕೆಯ ವಿಧಾನವಾಗಿದೆ. ಇದು ವಿದ್ಯಾರ್ಥಿಯಲ್ಲಿ ಅಂತರ್ಗತವಾಗಿರುವ ಜ್ಞಾನದ ಅನಾವರಣದ ಪ್ರಕ್ರಿಯೆಯಾಗಿದೆಯೇ ಹೊರತು, ಹೊರಗಿನಿಂದ ಬೇರಾವುದನ್ನೋ ಪಡೆಯುವ ಕ್ರಿಯೆಯಾಗಿ ಮಾತ್ರ ಉಳಿದಿಲ್ಲ.

೨. **ಏಕಾಗ್ರತೆಯೇ ಶಿಕ್ಷಣದ ಮೂಲಸಾರ:** ಜ್ಞಾನದ ಆವಿಷ್ಕಾರದ ಏಕಮಾತ್ರ ವಿಧಾನವೇ ಏಕಾಗ್ರತೆ. ಕಲಿಕೆಯಲ್ಲಿ ಏಕಾಗ್ರತೆಯು ಸಾರ್ವಭೌಮಿಕ ಹಾಗೂ ಸಾರ್ವಕಾಲಿಕವಾದ ಭೂಮಿಕೆಯನ್ನು ವಹಿಸುತ್ತದೆ. ಏಕಾಗ್ರತೆಯು ಜ್ಞಾನವನ್ನು ಕವಿದಿರುವ ಅಜ್ಞಾನದ ಪದರಗಳನ್ನು ಸರಿಸಿ, ವಿದ್ಯಾರ್ಥಿಯಲ್ಲಿ ಸುಪ್ತವಾಗಿರುವ ಕಲಿಯುವ ಅಪಾರ ಸಾಧ್ಯತೆ ಮತ್ತು ಸುಪ್ತ ಸಾಮರ್ಥ್ಯಗಳು ಪ್ರಕಟಗೊಳ್ಳುವಂತೆ ಮಾಡುತ್ತದೆ.

೩. **ಶಿಕ್ಷಣ ವಿದ್ಯಾರ್ಥಿಯನ್ನು ಪರಾವಲಂಬಿಯನ್ನಾಗಿ ಮಾಡಬಾರದು, ಸ್ವಾವಲಂಬಿಯನ್ನಾಗಿ ಮಾಡಬೇಕು:** ಈ ವಿಧಾನದಲ್ಲಿ ಗುರುವು ತಾನೇ ತಾನಾಗಿ ವಿದ್ಯೆಯನ್ನು ಅರಸುವುದಕ್ಕೆ ವಿದ್ಯಾರ್ಥಿಗೆ ಪ್ರೇರಣೆ ನೀಡುವಂಥ ಪ್ರಚೋದಕನ, ಪ್ರೇರಣಾಕರ್ತನ ಪಾತ್ರವನ್ನು ಮಾತ್ರ ವಹಿಸುತ್ತಾನೆ. ಹೀಗಾಗಿ ವಿದ್ಯಾರ್ಥಿಯು ತನ್ನ ಕಾಲಮೇಲೆ ನಿಂತು, ಸ್ವಪ್ರಯತ್ನದಿಂದ, ಅರಿವಿನ ರೋಚಕ ಮಾರ್ಗವನ್ನು ಕ್ರಮಿಸುವ ಅಗಾಧ ಸಾಹಸಕಾರ್ಯಕ್ಕೆ ಮುಂದಾಗುತ್ತಾನೆ.

೪. **ಇಲ್ಲಿ ವಿದ್ಯಾರ್ಥಿಯ ಲಕ್ಷ್ಯ ಭಗವತ್ತತ್ತ್ವವನ್ನು ಹುಡುಕುವುದು.** ಅದನ್ನು ಅವನು ಹೊರಗಡೆ ಹುಡುಕಿದ. ನಂತರ ಅದು ತನ್ನಲ್ಲೇ, ತನ್ನ ಅಂತರಂಗದಲ್ಲಿಯೇ ಇದೆ ಎನ್ನುವುದನ್ನು ಕಂಡುಕೊಂಡ. ಅರಿವಿನ ಅನ್ವೇಷಣೆಯ ಮಾರ್ಗವು ಕೊನೆಗೊಳ್ಳುವುದು ಅಂತರಂಗದ ಅಪಾರ ಹಾಗೂ ಅನಂತ ಶಕ್ತಿಯ ಅನಾವರಣದಲ್ಲಿಯೇ. ಅಂತಹ ಆಂತರಂಗಿಕ ಶೋಧನೆಯಾಗಿ ವಿದ್ಯೆಯು ಇಲ್ಲಿ ಬಿಂಬಿತವಾಗಿದೆ. ಇದು ವಿದ್ಯಾರ್ಥಿಯ ವ್ಯಕ್ತಿತ್ವದ ಒಳ ಆಯಾಮಗಳನ್ನು ವಿಕಸಿಸುತ್ತ, ಆ ಮೂಲಕ ಅದಕ್ಕೆ ಹಿನ್ನೆಲೆಯೂ ಆಧಾರವೂ ಆಗಿರುವ 'ಪರಿಪೂರ್ಣತೆ'ಯ ಪೂರ್ಣ ಅಭಿವ್ಯಕ್ತಿಯಲ್ಲಿ ಪರ್ಯವಸಾನವಾಗುತ್ತದೆ. ಹೀಗೆ ಕಲಿಕೆಯು ಬಾಹ್ಯ ಪ್ರಕ್ರಿಯೆಯಾಗದೆ, ಆಂತರಂಗಿಕ ಅನ್ವೇಷಣೆಯಾಗಿರುವುದು ಇಲ್ಲಿ ಸ್ಪಷ್ಟವಾಗುತ್ತದೆ.

೫. **ಇಲ್ಲಿ ಹೇಳಿಕೊಟ್ಟ ವಿದ್ಯೆ ಪರಾವಿದ್ಯೆ.** 'ಸಾ ವಿದ್ಯಾ ಯಾ ವಿಮುಕ್ತಯೇ' – ವಿದ್ಯೆಯು ಬಿಡುಗಡೆಯನ್ನು ತಂದುಕೊಡುತ್ತದೆ. ಅದೇ ನಿಜವಾದ ವಿದ್ಯೆಯೆನ್ನುವುದು ಭಾರತೀಯ ಪರಂಪರೆಯ ದೃಷ್ಟಿಕೋನ. ಇಲ್ಲಿ 'ಬಂಧನ' ಎಂದರೆ ಅಜ್ಞಾನದ ಬಂಧನ. 'ಅರಿವು' ಎನ್ನುವುದು ಅದರಿಂದ ಮುಕ್ತವಾಗುವ ಪ್ರಕ್ರಿಯೆ.

೬. **ಈ ವಿದ್ಯೆಯಿಂದ ವಿದ್ಯಾರ್ಥಿ ತನ್ನ ಅರಿವನ್ನು ಮಾಡಿಕೊಳ್ಳುತ್ತಾನೆ, ತನ್ನ ಚಾರಿತ್ರ್ಯವನ್ನು ಬೆಳೆಸಿಕೊಳ್ಳುತ್ತಾನೆ.** ಚಾರಿತ್ರ್ಯವರ್ಧನೆಯು ಶಿಕ್ಷಣದ ಅವಿಭಾಜ್ಯ ಅಂಗ. ವಿದ್ಯಾರ್ಥಿಯು ತನ್ನ ಬಗ್ಗೆ ಇರುವ ಅರಿವನ್ನು ಹೆಚ್ಚಿಸಿಕೊಳ್ಳುತ್ತಾ ಹೋದಾಗ, ಅವನಲ್ಲಿ, ತನ್ನ ಚಾರಿತ್ರ್ಯವನ್ನು ಬೆಳೆಸಿಕೊಳ್ಳಬೇಕು ಎಂಬ

ಆಕಾಂಕ್ಷೆಯೂ ಹುಟ್ಟುತ್ತದೆ. ಆಗ ಅವನು ಕೀಳು ಪ್ರವೃತ್ತಿಗಳಿಗೆ ಬಲಿಯಾಗುವುದಿಲ್ಲ.

ಈ ಆರು ಅಂಶಗಳು ಸ್ವಾಮಿ ವಿವೇಕಾನಂದರ ಶಿಕ್ಷಣ ತತ್ತ್ವದ ಆಧಾರಸ್ತಂಭಗಳು ಕೂಡ ಎನ್ನಬಹುದು. ಕಾರಣ, ಸ್ವಾಮೀಜಿಯವರ ಶಿಕ್ಷಣ ತತ್ತ್ವ ಆಧಾರಿತವಾಗಿರುವುದು ಉಪನಿಷತ್ ತತ್ತ್ವದ ಮೇಲೆಯೇ.

### ಶಿಕ್ಷಣ ಯಾರಿಗೆ?

ಶಿಕ್ಷಣ ಯಾರಿಗೆ? ಮಗುವಿಗೆ. ಮಗು ಯಾರು? ಅವನೊಬ್ಬ ಮಾನವ. ಮಾನವನೆಂದರೆ ದೇಹವೇ, ಮನಸ್ಸೇ ಅಥವಾ ಬುದ್ಧಿಯೇ? ನೈಜ ಮತ್ತು ಸರ್ವಾಂಗೀಣ ಶಿಕ್ಷಣ ಮಗುವಿನ ವ್ಯಕ್ತಿತ್ವದ ಈ ಎಲ್ಲ ಅಂಶಗಳನ್ನೂ ಗಮನದಲ್ಲಿ ಇಟ್ಟುಕೊಳ್ಳುತ್ತದೆ. ಶಕ್ತಿಯುತ ದೇಹ, ಬಲಾಢ್ಯ ಮನಸ್ಸು, ತೀಕ್ಷ್ಣಬುದ್ಧಿ ಇವೆಲ್ಲವೂ ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆಗೆ ಆವಶ್ಯಕ. ಅದಲ್ಲದೆ ಇಚ್ಛಾಶಕ್ತಿಯು ವೃದ್ಧಿಯಾಗುವ ಸಲುವಾಗಿ, ಮನಸ್ಸಿನ ಭಾವನೆಗಳು ಮತ್ತು ಸಹಜ ಪ್ರವೃತ್ತಿಗಳ ಮೇಲೆ ನಿಯಂತ್ರಣ ಸಾಧಿಸುವುದಕ್ಕೆ ತರಬೇತಿ ಕೊಡಬೇಕು. ಪರಿಪೂರ್ಣ ಶಿಕ್ಷಣವು ವ್ಯಕ್ತಿತ್ವದ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಆಯಾಮಗಳ ಮಧ್ಯೆ ಸರಿಯಾದ ಸಾಮರಸ್ಯ ಸಾಧಿಸುವುದಕ್ಕೆ ಸಹಾಯ ಮಾಡಬೇಕು. ಸ್ವಾಮಿ ವಿವೇಕಾನಂದರ ಶೈಕ್ಷಣಿಕ ಪರಿಕಲ್ಪನೆಯು ಈ ಉದ್ದೇಶವನ್ನು ಸಾಧಿಸಲು ಬೇಕಾದ ರೂಪುರೇಖೆಗಳನ್ನು ಒಳಗೊಂಡಿದೆ.

### ಆತ್ಮಶಿಕ್ಷಣ

ಮುಂಡಕೋಪನಿಷತ್ತು ಎರಡು ಹಂತಗಳ ವಿದ್ಯೆಗಳಿವೆ ಎಂದು ಹೇಳುತ್ತದೆ. ಉನ್ನತವಾದುದು 'ಪರಾ ವಿದ್ಯೆ', ಕೆಳಗಿನ ಹಂತದ್ದು 'ಅಪರಾ ವಿದ್ಯೆ'. ಲೌಕಿಕ ವಿದ್ಯೆ 'ಅಪರಾ ವಿದ್ಯೆ'. ಅಲೌಕಿಕ ವಿದ್ಯೆ 'ಪರಾ ವಿದ್ಯೆ', **ಯಯಾ ತದ್ ಅಕ್ಷರಮ್ ಅಧಿಗಮ್ಯತೇ** – ಯಾವುದರ ಮೂಲಕ ಅಕ್ಷರವನ್ನು (ನಾಶರಹಿತವಾದದ್ದನ್ನು) ತಿಳಿದುಕೊಳ್ಳಬಹುದೋ ಅದೇ ಪರಾ ವಿದ್ಯೆ. ಅಪರಾ ವಿದ್ಯೆಯು ತ್ಯಾಜ್ಯವಲ್ಲ, ಕೀಳೂ ಅಲ್ಲ. ಆದರೆ ಅದು ಪರಾವಿದ್ಯೆಯ ಗಳಿಕೆಗೆ ಬೇಕಾದ ಮನಃಪಕ್ವತೆಯನ್ನು ತಂದುಕೊಡಬೇಕು, ಆಧ್ಯಾತ್ಮಿಕ ಪ್ರವೃತ್ತಿಗೆ ಅವಶ್ಯಕವಾದ ಮಾನಸಿಕ ಪ್ರೌಢಿಮೆಯನ್ನು ವಿದ್ಯಾರ್ಥಿಯಲ್ಲಿ ಮೂಡಿಸಬೇಕು. ಪರಾ ವಿದ್ಯೆಯ ಗುರಿ ಆತ್ಮವಿದ್ಯೆ. ಹೀಗಾಗಿ ನಮ್ಮ ನೈಜಸ್ವರೂಪವನ್ನು ತಿಳಿದುಕೊಳ್ಳುವುದೇ ನಿಜವಾದ ಶಿಕ್ಷಣ. ಅದೇ ಎಲ್ಲ ಶಕ್ತಿಯ, ಎಲ್ಲ ಒಳ್ಳೆಯದರ ಮೂಲ.

### ಶಿಕ್ಷಣದ ಎರಡು ಮೂಲಭೂತ ಅಂಶಗಳು

ಸ್ವಾಮಿ ವಿವೇಕಾನಂದರು ಶಿಕ್ಷಣದ ಬಗ್ಗೆ ನೀಡಿರುವ ವ್ಯಾಖ್ಯಾನ ಅತ್ಯಂತ ಪ್ರಸಿದ್ಧವಾದುದು: **'ಶಿಕ್ಷಣವೆಂದರೆ ಮನುಷ್ಯನಲ್ಲಿ ಈಗಾಗಲೇ ಇರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು.'** ಈ ವ್ಯಾಖ್ಯಾನದಲ್ಲಿ 'ಪರಿಪೂರ್ಣತೆ' ಎಂಬ ಶಬ್ದವು ಬಹು ಮುಖ್ಯವಾದುದು. ವೇದಾಂತವು ಮಾನವನು ಅನಂತ ಸಾಧ್ಯತೆಗಳುಳ್ಳವನು ಎಂದು ಹೇಳುತ್ತದೆ. ಅವು ಪ್ರಕಟಗೊಂಡಿರುವುದು ಅಲ್ಪವೇ. ಅಂತಹ ಸಾಧ್ಯತೆಗಳನ್ನು ಹೆಚ್ಚು ಹೆಚ್ಚು ಪ್ರಕಟಮಾಡಲು ಪ್ರೇರಣೆ ಮತ್ತು ಉತ್ತೇಜನಗಳನ್ನು ಕೊಡುವುದೇ ಶಿಕ್ಷಣ. ಅನಂತ ಸಾಧ್ಯತೆಗಳ ಒಟ್ಟು ಮೊತ್ತವೇ ಪರಿಪೂರ್ಣತೆ. ಹೀಗಾಗಿ ಅದರ ಪ್ರಕಟಣೆಯನ್ನು ಮಾಡಲು ಸಹಾಯಕವಾಗುವುದೇ ಶಿಕ್ಷಣ. ಪರಿಪೂರ್ಣತೆ ಅಥವಾ ಅಂತರಂಗದ ಸುಪ್ತ ಸಾಧ್ಯತೆಗಳು ಎಷ್ಟರಮಟ್ಟಿಗೆ ವಿದ್ಯಾರ್ಥಿಯಲ್ಲಿ ಪ್ರಕಟಗೊಳ್ಳುವುವೋ, ಅಷ್ಟರಮಟ್ಟಿಗೆ ಅವನು ವಿದ್ಯಾಭ್ಯಾಸವನ್ನು ಪಡೆದಿದ್ದಾನೆ ಎಂದರ್ಥ.

> **ಜ್ಞಾನವೆಂಬುದು ಮನುಷ್ಯನಲ್ಲಿಯೇ ಅಡಗಿರುವುದು. ಹೊರಗಿನಿಂದ ಯಾವ ಜ್ಞಾನವೂ ಬರುವುದಿಲ್ಲ. ಅದೆಲ್ಲವೂ ಒಳಗೇ ಇರುವುದು.... ನ್ಯೂಟನ್ನನು ಗುರುತ್ವಾಕರ್ಷಣವನ್ನು ಕಂಡುಹಿಡಿದನೆಂದು ನಾವು ಹೇಳುತ್ತೇವಲ್ಲವೆ? ಅದೇನು ಎಲ್ಲಿಯೋ ಒಂದು ಮೂಲೆಯಲ್ಲಿ ಕುಳಿತುಕೊಂಡು ನ್ಯೂಟನ್ನನು ತನ್ನನ್ನು ಕಂಡುಹಿಡಿಯಲು ಬರುವನೆಂದು ಕಾಯುತ್ತಿದ್ದಿತೇನು? ಅದು ಆತನ ಮನಸ್ಸಿನಲ್ಲಿಯೇ ಇದ್ದಿತು; ಸಮಯ ಬಂದಿತು, ಆಗ ಅದು ಬಯಲಾಯಿತು, ಎಂದರೆ ಆತನಿಗೆ ಜ್ಞಾನ ಹೊಳೆಯಿತು. ಜಗತ್ತು ಗಳಿಸಿರುವ ಜ್ಞಾನವೆಲ್ಲವೂ ಮನಸ್ಸಿನಿಂದ ಬಂದುದೇ. ಜಗತ್ತಿನ ಅನಂತ ಪುಸ್ತಕಭಂಡಾರವೆಲ್ಲ ನಿಮ್ಮ ಮನಸ್ಸಿನಲ್ಲಿಯೇ ಇದೆ. ಬಾಹ್ಯ ಪ್ರಪಂಚವೆಂಬುದು ಸೂಚನೆ ಮಾತ್ರ, ಅದು ನಿಮ್ಮ ಮನಸ್ಸನ್ನು ವಿಚಾರ ಮಾಡುವಂತೆ ಪ್ರೇರೇಪಿಸುವುದು.**
>
> **–ಸ್ವಾಮಿ ವಿವೇಕಾನಂದ (ಕೃತಿಶ್ರೇಣಿ ೧ : ೨೯, ೩೦)**

ಸ್ವಾಮಿ ವಿವೇಕಾನಂದರು ಬಹಳ ಒತ್ತು ಕೊಡುವ ಎರಡನೆಯ ಅಂಶವೆಂದರೆ, 'ಏಕಾಗ್ರತೆ'. ಅವರ ಪ್ರಕಾರ ಏಕಾಗ್ರತೆಯೇ ವಿದ್ಯಾಭ್ಯಾಸದ ಸಾರ. ಅವರು ಹೀಗೆ ಹೇಳುತ್ತಾರೆ: "ನನ್ನ ದೃಷ್ಟಿಯಲ್ಲಿ ವಿದ್ಯಾಭ್ಯಾಸದ ಸಾರವೇ ಮನಸ್ಸಿನ ಏಕಾಗ್ರತೆ. ಬರಿಯ ವಿಷಯ ಸಂಗ್ರಹವಲ್ಲ. ನಾನು ಪುನಃ ವಿದ್ಯಾಭ್ಯಾಸವನ್ನು ಪ್ರಾರಂಭಿಸಬೇಕಾದರೆ, ಈ ನಿಟ್ಟಿನಲ್ಲಿ ನನಗೇನಾದರೂ ಸ್ವಲ್ಪ ಸ್ವಾತಂತ್ರ್ಯವಿದ್ದರೆ ನಾನು ವಿಷಯಗಳನ್ನು ಕಲಿತುಕೊಳ್ಳುವುದಿಲ್ಲ. ನಾನು ಮೊದಲು ಮನಸ್ಸನ್ನು ಹೇಗೆ ಏಕಾಗ್ರಗೊಳಿಸುವುದು ಮತ್ತು ಅದನ್ನು ಹೇಗೆ ಹಿಂದಕ್ಕೆ ಸೆಳೆಯುವುದು ಎಂಬುದನ್ನು ಕಲಿತುಕೊಂಡು, ಅನಂತರ ಒಂದು ಸರಿಯಾದ ಉಪಕರಣದಿಂದ ನನ್ನ ಇಚ್ಛಾಪ್ರಕಾರ ವಿಷಯಗಳನ್ನು ಸಂಗ್ರಹಿಸುತ್ತೇನೆ" (ಕೃ. ಶ್ರೇ. ೬:೧೮೬).

ಸ್ವಾಮೀಜಿ ಏಕಾಗ್ರತೆಯನ್ನು ಜಗತ್ತಿನ ಜ್ಞಾನಭಂಡಾರವನ್ನು ತೆರೆಯಲು ಸಾಧ್ಯವಾಗುವ ಏಕಮಾತ್ರ ಕೀಲಿಕೈ ಎಂದು ಪರಿಗಣಿಸಿದ್ದರು. ಅವರು ಇದರ ಬಗ್ಗೆ ಹೀಗೆ ನುಡಿಯುತ್ತಾರೆ: "ಹೆಚ್ಚು ಏಕಾಗ್ರತೆ ಇದ್ದಷ್ಟೂ ಹೆಚ್ಚು ಜ್ಞಾನಾರ್ಜನೆಯಾಗುವುದು. ಇದೊಂದೇ ಜ್ಞಾನಾರ್ಜನೆಗೆ ಇರುವ ಏಕಮಾತ್ರ ಮಾರ್ಗ. ಬೂಟ್ಸಿಗೆ ಬಣ್ಣಹಾಕುವ ಅತಿ ಹೀನ ವ್ಯಕ್ತಿ ಕೂಡ ಹೆಚ್ಚು ಏಕಾಗ್ರತೆಯಿಂದ ಕೆಲಸ ಮಾಡಿದರೆ ಚೆನ್ನಾಗಿ ಬೂಟ್ಸಿಗೆ ಬಣ್ಣ ಹಾಕಬಲ್ಲ. ಅಡುಗೆ ಮಾಡುವವನಿಗೆ ಏಕಾಗ್ರತೆ ಹೆಚ್ಚು ಇದ್ದಷ್ಟೂ ಚೆನ್ನಾಗಿ ಅಡುಗೆ ಮಾಡಬಲ್ಲ. ದ್ರವ್ಯಾರ್ಜನೆಯಾಗಲಿ, ದೇವರ ಪೂಜೆಯಾಗಲಿ ಅಥವಾ ಮತ್ತಾವ ಕೆಲಸವಾದರೂ ಆಗಲಿ, ಹೆಚ್ಚು ಏಕಾಗ್ರತೆ ಇದ್ದಷ್ಟೂ ಚೆನ್ನಾಗಿ ಅದನ್ನು ಮಾಡಬಹುದು. ಈ ಕರೆಯೊಂದೇ, ಈ ಶಬ್ದ ಒಂದೇ, ಪ್ರಕೃತಿಯ ದ್ವಾರಗಳನ್ನು ತೆರೆದು ಜ್ಞಾನಪ್ರವಾಹವನ್ನು ನೀಡುವುದು" (ಕೃ. ಶ್ರೇ. ೨:೩೩೧).

### ಶಿಕ್ಷಣ ಎಂದರೆ ಏನು?

ಮೇಲೆ ಹೇಳಿದ ಅಂಶಗಳ ಆಧಾರದ ಮೇಲೆ ಸ್ವಾಮಿ ವಿವೇಕಾನಂದರು ಕೊಟ್ಟ ಶಿಕ್ಷಣದ ಪರಿಕಲ್ಪನೆಗಳನ್ನು ನಾವು ತಿಳಿದುಕೊಳ್ಳಬಹುದು. ಎಂತಹ ಶಿಕ್ಷಣ ನಮಗೆ ಬೇಕು ಎನ್ನುವುದಕ್ಕೆ ಸ್ವಾಮೀಜಿಯವರ ನಾಲ್ಕು ಬಗೆಯ ಪರಿಕಲ್ಪನೆಗಳನ್ನು ಅಧ್ಯಯನ ಮಾಡುವುದು ಇಲ್ಲಿ ಸಹಕಾರಿ.

### ಮೊದಲನೆಯ ಪರಿಕಲ್ಪನೆ

**ಯಾವ ಬಗೆಯ ಶಿಕ್ಷಣದಿಂದ ಶೀಲ ರೂಪುಗೊಳ್ಳುವುದೊ, ಮನಶ್ಶಕ್ತಿಯ ವೃದ್ಧಿಯಾಗುವುದೊ, ಬುದ್ಧಿ ವಿಕಾಸಗೊಳ್ಳುವುದೊ ಮತ್ತು ಯಾವುದರಿಂದ ನಮ್ಮ ಸ್ವಂತ ಕಾಲಮೇಲೆ ನಾವು ನಿಂತುಕೊಳ್ಳಬಲ್ಲೆವೋ ಅಂತಹ ಶಿಕ್ಷಣ ನಮಗೆ ಆವಶ್ಯಕ.**

(ಕೃ. ಶ್ರೀ. ೮ : ೩೧೦)

ಸ್ವಾಮಿ ವಿವೇಕಾನಂದರು ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಶೀಲ ನಿರ್ಮಾಣ, ಮನಶ್ಶಕ್ತಿಯ ಸಂವರ್ಧನೆ, ಬುದ್ಧಿಯ ವಿಕಾಸ ಮತ್ತು ಸ್ವಾವಲಂಬನೆಯ ಬೆಳವಣಿಗೆ –ಇವುಗಳನ್ನು ಸಾಧಿಸಿದರೆ ಮಾತ್ರ ಅದು ನೈಜ ಶಿಕ್ಷಣವೆನಿಸಬಲ್ಲುದು ಎಂದು ಹೇಳುತ್ತಾರೆ. ಚಾರಿತ್ರ್ಯನಿರ್ಮಾಣ ವಿದ್ಯಾಭ್ಯಾಸದ ಒಂದು ಮುಖ್ಯ ಕರ್ತವ್ಯ ಎಂದು ಸ್ವಾಮಿ ವಿವೇಕಾನಂದರ ಅಭಿಪ್ರಾಯವಾಗಿತ್ತು. ಅವರು ಹೀಗೆ ಕರೆಕೊಡುತ್ತಾರೆ: "ಶುದ್ಧ ಚಾರಿತ್ರ್ಯವುಳ್ಳವನಾಗು, ಧೈರ್ಯವಂತನಾಗು, ಅಂತಃಕರಣಪೂರಿತನಾಗು – ಕಟ್ಟುನಿಟ್ಟಿನ ನೀತಿವಂತನಾಗಿರಬೇಕು. ಜೀವದ ಹಂಗನ್ನು ತೊರೆಯುವಂತಹ ಧೈರ್ಯವಂತನಾಗಿರಬೇಕು. ಮತ ತತ್ತ್ವಗಳಿಂದ ನಿನ್ನ ತಲೆಯನ್ನು ಕೆಡಿಸಿಕೊಳ್ಳಬೇಡ. ಹೇಡಿಗಳು ಮಾತ್ರ ಪಾಪ ಮಾಡುವರು. ಧೀರರು ತಮ್ಮ ಮನಸ್ಸಿನಲ್ಲಿ ಕೂಡ ಎಂದಿಗೂ ಪಾಪವನ್ನು ಮಾಡುವುದಿಲ್ಲ" (ಕೃ. ಶ್ರೀ. ೪. ೨೬).

ಚಾರಿತ್ರ್ಯವರ್ಧನೆಯನ್ನು ಮಾಡಿಕೊಳ್ಳುವ ವಿಧಾನವನ್ನು ಸ್ವಾಮೀಜಿ ಹೀಗೆ ಹೇಳಿಕೊಡುತ್ತಾರೆ: ನಾವು ಮಾಡುವ ಆಲೋಚನೆಗಳೇ ಕಾರ್ಯಗಳಾಗಿ ಪರಿಣಮಿಸುವುದು. ಮತ್ತೆ ಮತ್ತೆ ಮಾಡುವ ಕಾರ್ಯಗಳು ಅಭ್ಯಾಸಗಳನ್ನೂ, ಅಭ್ಯಾಸಗಳು ಮನಸ್ಸಿನ ಸಂಸ್ಕಾರಗಳನ್ನೂ ಉಂಟುಮಾಡುತ್ತವೆ. ಮನಸ್ಸಿನ ಸಂಸ್ಕಾರಗಳ ಒಟ್ಟು ಮೊತ್ತವನ್ನೇ ನಾವು 'ಶೀಲ' ಅಥವಾ 'ಚಾರಿತ್ರ್ಯ' ಎನ್ನುವುದು. ಆದ್ದರಿಂದ ಶೀಲನಿರ್ಮಾಣಕ್ಕೆ, ಒಬ್ಬನು ಮಾಡುವ ಆಲೋಚನೆಗಳೇ ಮುಖ್ಯ ಆಕರಗಳಾಗುತ್ತವೆ. ಆದ್ದರಿಂದ 'ನಿಮ್ಮ ಆಲೋಚನೆಗಳ ಬಗ್ಗೆ ಗಮನ ನೀಡಿ' ಎಂದು ಸ್ವಾಮಿ ವಿವೇಕಾನಂದರು ಕರೆ ಕೊಡುತ್ತಾರೆ.

ಮಾನವನು ತಾನು ಹೊಂದಿರುವ ಅಪಾರವಾದ ಮನಶ್ಶಕ್ತಿಯನ್ನು ಸಂಯಮದಿಂದ ನಿಗ್ರಹಿಸಿ, ಉನ್ನತ ಹಂತಗಳಲ್ಲಿ ಹರಿಸಿದಾಗ, ಅದ್ಭುತ ಕಾರ್ಯಗಳನ್ನು ಮಾಡಬಹುದು ಎಂದು ಸ್ವಾಮೀಜಿ ಅಭಿಪ್ರಾಯಪಡುತ್ತಾರೆ. ಮನಶ್ಶಕ್ತಿಯ ಅದ್ಭುತ ಸಾಮರ್ಥ್ಯದ ಬಗ್ಗೆ ಅವರ ಕೆಲವು ಉಕ್ತಿಗಳು ಹೀಗಿವೆ:

"ನೀವು ಇಚ್ಛೆಸುವುದೆಲ್ಲಾ ಪ್ರಾಪ್ತವಾಗುವುದು. ದುರ್ಬಲರೆಂದು ಯೋಚಿಸಿದರೆ ದುರ್ಬಲರಾಗುವಿರಿ. ಶಕ್ತಿವಂತರೆಂದು ಯೋಚಿಸಿದರೆ ಶಕ್ತಿವಂತರಾಗುವಿರಿ" (ಕೃ. ಶ್ರೀ. ೩.೨೪).

"ಪ್ರತಿಯೊಬ್ಬನನ್ನೂ ಈ ಒಂದು ಪ್ರಶ್ನೆಯನ್ನು ಕೇಳುತ್ತೇನೆ – 'ನೀವು ಬಲಿಷ್ಠರಾಗಿರುವಿರಾ?' ಬಲಿಷ್ಠರೆಂದು ಭಾವಿಸುವಿರಾ? ಸತ್ಯ ಮಾತ್ರ ಬಲವನ್ನು ನೀಡಬಲ್ಲದೆಂಬುದು ನನಗೆ ಗೊತ್ತಿದೆ... ಭವರೋಗಕ್ಕೆ ಔಷಧವೇ ಶಕ್ತಿ" (ಕೃ. ಶ್ರೀ. ೨. ೧೩೧).

"ಇದೊಂದು ದೊಡ್ಡ ಸತ್ಯ – ಶಕ್ತಿಯೇ ಜೀವನ, ದುರ್ಬಲತೆಯೇ ಮರಣ, ಶಕ್ತಿಯೇ ಪರಮಾನಂದ, ಅಖಂಡಜೀವನ, ಅಮರತ್ವ, ದುರ್ಬಲತೆಯೇ ಅನವರತ ದುಃಖ, ತಳಮಳ, ದುರ್ಬಲತೆಯೇ ಮರಣ" (ಕೃ. ಶ್ರೀ. ೬. ೨೪೪).

ಇದರ ಜೊತೆಗೆ, ವಿದ್ಯಾಭ್ಯಾಸದಿಂದ ಮಾನವನ **ಬುದ್ಧಿಯ ವಿಕಾಸ** ಅಂದರೆ **ವಿವೇಕಪ್ರಜ್ಞೆಯ** ಜಾಗೃತಿ ಆಗಬೇಕು ಮತ್ತು ಒಬ್ಬ ವ್ಯಕ್ತಿಯು ದೈಹಿಕವಾಗಿ ಮತ್ತು ಭಾವನಾತ್ಮಕವಾಗಿ ತನ್ನ ಕಾಲಮೇಲೆ ನಿಂತುಕೊಂಡು ಸ್ವತಂತ್ರ ಹಾಗೂ ನಿರ್ಭಯವಾದ ಜೀವನವನ್ನು ನಡೆಸಲು ಸಹಾಯಕವಾಗಬೇಕು. ಈ ಬಗೆಯ ಸ್ವತಂತ್ರ ಪ್ರವೃತ್ತಿಗೆ ಸ್ವಾಮಿ ವಿವೇಕಾನಂದರು ತುಂಬ ಮಹತ್ವ ಕೊಡುತ್ತಿದ್ದರು. ಅವರು ಹೇಳುತ್ತಾರೆ: "ಯಾವುದಾದರೊಂದು ಪದವು ಉಪನಿಷತ್ತುಗಳ ಮಹಾಗಣಿಯಿಂದ ಸಿಡಿಮದ್ದಿನಂತೆ ಹಾರುತ್ತಿದ್ದರೆ, ಸಿಡಿಮದ್ದಿನಂತೆ ಅಜ್ಞಾನಿಗಳ ಮೇಲೆ ಸಿಡಿಯುತ್ತಿದ್ದರೆ, ಅದೇ 'ಅಭೀಃ' ಎಂಬ ಪದ. ಬೋಧಿಸಬೇಕಾದ ಒಂದೇ ಒಂದು ಧರ್ಮವೆಂದರೆ 'ಅಭೀಃ' ಅಥವಾ ನಿರ್ಭೀತಿ ಎಂಬ ಧರ್ಮ" (ಕೃ. ಶ್ರೀ. ೩.೪೯).

### ಎರಡನೆಯ ಪರಿಕಲ್ಪನೆ

**ವೇದಾಂತದೊಡನೆ ಮಿಳಿತಗೊಂಡಿರುವ ಪಾಶ್ಚಾತ್ಯವಿಜ್ಞಾನ, ಬ್ರಹ್ಮಚರ್ಯವೇ ಆಸರೆಯಾದ ಧ್ಯೇಯ ಮತ್ತು ನಮ್ಮ ಆತ್ಮದಲ್ಲಿ ದೃಢವಾದ ಶ್ರದ್ಧೆ ಮತ್ತು ನಂಬಿಕೆ – ಇವು ನಮಗೆ ಬೇಕಾಗಿರುವುದು.... ಮನುಷ್ಯನಲ್ಲಿಯೇ ಎಲ್ಲ ಜ್ಞಾನವೂ ಇದೆ ಎಂದು ವೇದಾಂತ ಹೇಳುವುದು. ಚಿಕ್ಕ ಹುಡುಗನಲ್ಲಿ ಕೂಡ ಈ ಜ್ಞಾನ ಇದೆ – ಏನಿದ್ದರೂ ಅದನ್ನು ಜಾಗ್ರತಗೊಳಿಸಬೇಕು ಅಷ್ಟೆ.**

(ಕೃ. ಶ್ರೀ. ೮. ೨೭೮– ೭೯)

ಮೇಲಿನ ವಾಕ್ಯದಲ್ಲಿ ಸ್ವಾಮಿ ವಿವೇಕಾನಂದರು, ವೇದಾಂತದ ಜೊತೆಗೆ ವಿಜ್ಞಾನ, ಬ್ರಹ್ಮಚರ್ಯ, ಶ್ರದ್ಧೆಗಳೆಂಬ ಮೂರು ಅಂಶಗಳ ಬಗ್ಗೆ ಹೇಳುವರು. ಪಾಶ್ಚಾತ್ಯ ವಿಜ್ಞಾನವು ಭೌತಿಕ ಸುಖಸಾಧನೆಗೆ ಸಹಾಯಕವಾಗುವುದಾದರೂ ಅದರೊಂದಿಗೆ ಮಿಳಿತಗೊಂಡ ನೈತಿಕ ಮತ್ತು ಆಧ್ಯಾತ್ಮಿಕ ಅಂಶಗಳು ಮಾತ್ರವೇ ಮಾನವನ ಬದುಕನ್ನು ಸುಸಂಪನ್ನವಾಗಿ ಮಾಡಬಲ್ಲುವು. ಇದೇ ಸ್ವಾಮೀಜಿಯವರ ಮಾತಿನ ಅಭಿಪ್ರಾಯ. ಹಿಂದಿನ ಕಾಲದಲ್ಲಿ ವಿದ್ಯಾರ್ಥಿಗಳನ್ನು ಬ್ರಹ್ಮಚಾರಿಗಳೆಂದೇ ಹೆಸರಿಸಲಾಗುತ್ತಿತ್ತು. ಮನಸ್ಸು ಮತ್ತು ಇಂದ್ರಿಯಗಳ ನಿಗ್ರಹವೇ ಏಕಾಗ್ರತೆಯ ಸಂಪಾದನೆಗೆ ಮುಖ್ಯಸಾಧನ. ಸ್ವಾಮೀಜಿ ಹೀಗೆ ಹೇಳುತ್ತಾರೆ: "ಕಟ್ಟುನಿಟ್ಟಾದ ಬ್ರಹ್ಮಚರ್ಯದ ಅಭ್ಯಾಸದಿಂದ ಎಲ್ಲ ವಿದ್ಯೆಯ ಕಲಿಕೆ ಅತ್ಯಲ್ಪ ಕಾಲದಲ್ಲೇ ಕರತಲಾಮಲಕವಾಗುತ್ತದೆಂಬುದನ್ನು ನೀವು ಗಮನಿಸಿಲ್ಲವೆ? ಒಮ್ಮೆಯಷ್ಟೇ ಓದಿದ್ದನ್ನು ಅಥವಾ ಕೇಳಿದ್ದನ್ನು ಮರೆಯದೆ ಇರುವಂಥ ಜ್ಞಾಪಕಶಕ್ತಿ ಬ್ರಹ್ಮಚರ್ಯದಿಂದ ಬರುವುದು. ನಮ್ಮ ದೇಶದಲ್ಲಿ ಬ್ರಹ್ಮಚರ್ಯದ ಅಭಾವದಿಂದ ಎಲ್ಲವೂ ವಿನಾಶದ ಅಂಚಿನಲ್ಲಿರುವುದು" (ಕೃ. ಶ್ರೀ. ೮.೨೭೧). ಹೀಗೆ, ವಿದ್ಯಾರ್ಥಿಜೀವನಕ್ಕೆ ಬ್ರಹ್ಮಚರ್ಯವೇ ಆಧಾರ ಎಂದು ಸ್ವಾಮೀಜಿ ಹೇಳುತ್ತಾರೆ.